ದಿನಾಂಕಃ 03-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ಮುಂದುವರಿದ ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎಸ್.ಕೆ.ಎಂ. ವಕೀಲರಿಂದ

ದಾವೆ ದಾಖಲು ಮಾಡುವ ಕಾಲಕ್ಕೆ 2 ರಿಂದ 2 ಸಾವಿರ ಇತ್ತು. ಆಗ ಕೊಳವೆ ಬಾವಿ ಹಾಕಿಸಲು 40 ರಿಂದ 50 ಸಾವಿರ ಆಗಿರುತ್ತದೆ. ರಮೇಶ್ ಎನ್ನುವರು ನನ್ನ ಮೇಲೆ ಯಾವುದೇ ಪ್ರಕರಣವನ್ನು ದಾಖಲಿಸಿರುವುದಿಲ್ಲ. ನಂಜಮ್ಮ ಎನ್ನುವರು ನನ್ನ ಮೇಲೆ ಅಸಲು ದಾವೆ ಸಂಖ್ಯೆ 12/14 ದಾಖಲಿಸಿರುತ್ತಾರೆ. ಯಾವ ಕಾರಣಕ್ಕೆ ಹಾಕಿದ್ದರು ಎಂದು ಗೊತ್ತಿರುವುದಿಲ್ಲ, ನೋಟೀಸು ಬಂದಿರುತ್ತದೆ ತೆಗೆದುಕೊಂಡಿರುತ್ತೇನೆ. ಇದೆ ನ್ಯಾಯಾಲಯದಲ್ಲಿ ಆ ದಾವೆ ಇತ್ತು ಎಂದರೆ ಸರಿ, ಈ ದಾವ ಸ್ವತ್ತಿಗೆ ಸಂಬಂಧಿಸಿದಂತೆ ಇತ್ತು ಎಂದರೆ ಸರಿ. ಏನಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ರಮೇಶ್ ಎನ್ನುವರು ನಿಮ್ಮ ಮೇಲೆ 2013 ನೇ ಇಸವಿಯಲ್ಲಿ ಅಸಲು ದಾವೆ ಸಂಖ್ಯೆ 45 ದಾವೆಯನ್ನು ದಾಖಲಿಸಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ ಯಾವುದೇ ನೋಟೀಸು ಬಂದಿರುವುದಿಲ್ಲ. 14-10-1977 ರಲ್ಲಿ ನಾನು ಮನೆಯನ್ನು ಬಿಟ್ಟು ಬಂದಿರುತ್ತೇನೆ. ಅನಂತಕುಮಾರ್ ರವರ ಅಪ್ಪನ ಹೆಸರು ನಾರಾಯಣಪ್ಪ ಮತ್ತು ತಾಯಿಯ ಹೆಸರು ಪ್ರಮಿಳಮ್ಮ ಎಂದು ನಿಮಗೆ ಗೊತ್ತಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ಹರೀಶ್ ರವರ ತಂದೆ ಹೆಸರು ನಾರಾಯಣಪ್ಪ ಎಂದರೆ ಅವರು ಗೊತ್ತಿರುತ್ತಾರೆ. ಸರ್ವೇ ನಂ 43 , 1 ಎಕರೆ 20 ಪೈಕಿ 29 ಗುಂಟೆ ನಾರಾಯಣಪ್ಪನಿಗೆ ಸೇರಿದ್ದು ಎಂದರೆ ನನಗೆ ಗೊತ್ತಿರುವುದಿಲ್ಲ. ಆ ಜಮೀನಿನಲ್ಲಿ ಐ ಪಿ ಸೆಟ್ ಇದೆ ಎಂದರೆ ಆ ಜಮೀನಿನ ಕೆಳಭಾಗದಲ್ಲಿ ಇದೆ. ನಾರಾಯಣಪ್ಪನಿಗೆ ವಿಭಾಗದ ಪತ್ರದ ಮೂಲಕ ಆಸ್ತಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ . ಆಕುಲ ವೆಂಕಟಸ್ವಾಮಿಯಿಂದ ನಾರಾಯಣಪ್ಪ ನವರು ಜಮೀನನ್ನು ಖರೀದಿ ಮಾಡಿರುತ್ತಾರೆ. 43

ನೇ ಸರ್ವೇ ನಂಬರ್ ನನಗೆ ಗೊತ್ತಿರುವುದಿಲ್ಲ. ಸರ್ವೇ ನಂ 43 29 ಗುಂಟೆ ಜಮೀನಿಗೆ ಪೂರ್ವಕ್ಕೆ ನಾರಾಯಣಪ್ಪ ನವರ ಜಮೀನು, ಪಶ್ಚಿಮಕ್ಕೆ ರಸ್ತೆ , ಉತ್ತರಕ್ಕೆ ಪ್ರಮಿಳಮ್ಮ , ರತ್ನಮ ನವರು ಜಮೀನು ದಕ್ಷಿಣಕ್ಕೆ ಜಮೀನು ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ಜಮೀನು ಇದೆ ಎಂದು ನುಡಿಯುತ್ತಾರೆ. ಸರ್ವೆ ನಂ 43 ರ ಜಮೀನು 04-07-2001 ರಲ್ಲಿ ಪ್ರಮಿಳಮ್ಮ ಮತ್ತು ನಾರಾಯಣಪ್ಪ ನವರಿಗೆ ಜಂಟಿಯಾಗಿ ಬಂದಿರುತ್ತದೆ ಎಂದರೆ ಸರಿ. ನಾರಾಯಣಪ್ಪ ಸತ್ತ ನಂತರ ಪ್ರಮಿಳಮ್ಮ ನವರ ಹೆಸರಿಗೆ ಮ್ಯುಟೇಶನ್ ಬಂದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 23-12-2013 ರಲ್ಲಿ ಪ್ರಮಿಳಮ್ಮ , ಹರೀಶ್ , ತನುಜಾ ಮತ್ತು ರೂಪ ಇವರೆಲ್ಲರೂ ಜಂಟಿಯಾಗಿ ಆಸ್ತಿಯನ್ನು ವೀರಭದ್ರಪ್ಪ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ವೀರಭದ್ರಪ್ಪ ನವರು ಜಮೀನನ್ನು ತೆಗೆದುಕೊಂಡ ನಂತರ ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ.

ನಾನು ವೀರಭದ್ರಪ್ಪನ ಮೇಲೆ ದಾವೆ ಸಲ್ಲಿಸಿರುತ್ತೇನೆ ಅವರೊಬ್ಬರನ್ನು ಹೊರತು ಪಡಿಸಿ ಬೇರೊಬ್ಬರ ಮೇಲೆ ದಾವೆ ಸಲ್ಲಿಸಿರುವುದಿಲ್ಲ, ಯಾವ ಬೇರೆ ಪರಿಹಾರ ಕೇಳಿ ದಾವೆ ಸಲ್ಲಿಸಿರುವುದಿಲ್ಲ. ನಾನು ದಾವೆಯಲ್ಲಿ ಹೇಳಿರುವ ನೀಲಗಿರಿ ಮರಗಳು ಒಂದೊಂದು 100 ರಿಂದ 150 ರೂಪಾಯಿ ಬೆಲೆ ಬಾಳುತ್ತವೆ. ಅದೇ ರೀತಿ 2 ತೆಂಗಿನ ಮರಗಳಿದ್ದು ಅವುಗಳಲ್ಲಿ ಕಾಯಿ ಬಿಡಿಸಿರುವುದಿಲ್ಲ. ಸರ್ವೇ ನಂ 43 ರಲ್ಲಿ ಬರುವ ಚೆಕ್ಕುಬಂದಿಯನ್ನೇ ನಿಮ್ಮ ದಾವಾ ಆಸ್ತಿಗೆ ಚೆಕ್ಕುಬಂದಿ ಹಾಕಿರುತ್ತೀರಿ ಎಂದರೆ ಸರಿ. ಸರ್ವೇ ನಂ. 43 ಗೆ ನಿಮಗೆ ಯಾವುದಾದರೂ ಹಕ್ಕು ಮತ್ತು ಸ್ವಾಧೀನ ಇದೆಯಾ ಎಂದರೆ ಸಾಕ್ಷಿಯು ಚೆಕ್ಕುಬಂದಿಯ ಪ್ರಕಾರ ದಾವೆ ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಹೇಳಿರುವ ಚೆಕ್ಕುಬಂದಿ ಸರ್ವೇ ನಂ 43 ಕ್ಕೆ ಬರುತ್ತದೆಯೋ ಅಥವಾ 47 ಕ್ಕೆ ಬರುತ್ತದೆಯೋ ಎಂದರೆ ನನಗೆ ಗೊತ್ತಿರುವುದಿಲ್ಲ, ನೀವು ಹೇಳಿರುವ ಚೆಕ್ಕುಬಂದಿ ಯಾವ ಸರ್ವೇ ನಂಬರ್ ಗೆ ಬರುತ್ತದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಬೋರ್ ವೆಲ್ , ಮರಗಳು ಯಾವ ಸರ್ವೇ ನಂಬರ್ ನಲ್ಲಿ

ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಸರ್ವೆ ನಂ **43** ವೀರಭದ್ರಪ್ಪನವರಿಗೆ ಸೇರಿದ್ದು ಅವರೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ, ಆ ಸರ್ವೆ ನಂಬರ್ ನಲ್ಲಿ ವೀರಭದ್ರಪ್ಪನವರೇ ಬೆಳೆ ಬೆಳೆದುಕೊಂಡು ಬೋರ್ ವೇಲ್ ಹಾಕಿರಸಿರುತ್ತಾರೆ ಎಂದರೆ ಸರಿಯಲ್ಲ, ಸರ್ವೆ ನಂ **.43** ರ ಆಸ್ತಿಯನ್ನು ಕಬಳಿಸಬೇಕೆಂಬ ದೃಷ್ಟಿಯಿಂದ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

ನಿಪಿ **15** ರಲ್ಲಿ ತಿಳಿಸಿರುವಂತೆ ಸರ್ವೆ ನಂ **43** ಕ್ಕೆ ಸಂಬಂಧಿಸಿದ ಚೆಕ್ಕು ಬಂದಿ ಎಂದುಹೇಳಿ ತಹಸಿಲ್ದಾರ್ ರವರಿಗೆ ಅರ್ಜಿ ನೀಡಿರುತ್ತೀರಾ ಎಂದರೆ ಸರಿ. ವೀರಭದ್ರಪ್ಪ ನವರ ಆಸ್ತಿಯನ್ನು ಎತ್ತಿ ಹಾಕಬೇಕೆಂಬ ಸಲುವಾಗಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ, ಈ ದಾವಾ ಸ್ವತ್ತಿನ ಮೇಲೆ ಇನ್ನು **3-4** ಕೇಸು ಗಳಿದ್ದು ಅವುಗಳನ್ನೆಲ್ಲಾ ಮರಮಾಚಿ ಈ ದಾವಾ ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ. ಸರ್ವೆ ನಂ **41/2** ರಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ಹಿಸ್ಸೆ ಇದೆ ಎಂಬುದು ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ಹೇಳಿರುವ ಚೆಕ್ಕುಬಂದಿಯಲ್ಲಿ ನೀವು ಎಂದಿಗೂ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ, ನಿಮಗೂ ಮತ್ತು ದಾವಾ ಆಸ್ತಿಯಲ್ಲಿ ಹೇಳಿರುವ ಚೆಕ್ಕುಬಂದಿಗೆ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.